# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಆರ್. ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಹೆಚ್.ಡಿ. ಕೋಟೆ ಹಾಗೂ ಶ್ರೀ ರಾಮಚಂದ್ರರಾಜೆ ಅರಸ್, ಕೃಷಿ ಅಧಿಕಾರಿ (ಪ್ರಭಾರ), ಕಸಬಾ ರೈತ ಸಂಪರ್ಕ ಕೇಂದ್ರ ಹೆಚ್.ಡಿ. ಕೋಟೆ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 33 ಕೃಪವಿ 2006, ದಿನಾಂಕ: 22-06-2009.
2. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 33 ಕೃಪವಿ 2006, ದಿನಾಂಕ: 30-12-2009.
3. ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ-1/ ವಿಚಾರಣೆ-4/3/ಮೈ/2004-05. ದಿನಾಂಕ: 11-06-2012.

*********

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಆರ್. ನಾರಾಯಣಸ್ವಾಮಿ, ಸಹಾಯಕ ಕೃಷಿ ನಿರ್ದೇಶಕರು, ಹೆಚ್.ಡಿ. ಕೋಟೆ, ಹಾಗೂ ಶ್ರೀ ರಾಮಚಂದ್ರರಾಜೆ ಅರಸ್, ಕೃಷಿ ಅಧಿಕಾರಿ (ಪ್ರಭಾರ), ಕಸಬಾ ರೈತ ಸಂಪರ್ಕ ಕೇಂದ್ರ, ಹೆಚ್.ಡಿ. ಕೋಟೆ, ಇವರುಗಳ ವಿರುದ್ಧ ಉದ್ದೇಶಿಸಲಾಗಿರುವ ಜಂಟಿ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿನ್ನಾಗಿ ಮತ್ತು ಶಿಸ್ತು ಪ್ರಾಧಿಕಾರಿಯ ಪರವಾಗಿ ವಿಷಯವನ್ನು ಮಂಡಿಸಲು ಅಧೀಕ್ಷಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ, ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅಧೀಕ್ಷಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ, ಇವರನ್ನು ಬದಲಾಯಿಸಿ ಶ್ರೀ ಎಸ್. ಕಾಂತರಾಜು, ಅಧೀಕ್ಷಕರು, ಹಾಗೂ ಮಂಡನಾಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚನ್ನಪಟ್ಟಣ, ಇವರನ್ನು ನೇಮಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಶ್ರೀ ಎಸ್. ಕಾಂತರಾಜು, ಅಧೀಕ್ಷಕರು, ಹಾಗೂ ಪ್ರಕರಣದ ಮಂಡನಾಧಿಕಾರಿರವರು ಬೇರೊಂದು ಪ್ರಕರಣದಲ್ಲಿ ಶಿಸ್ತು ಕ್ರಮಕ್ಕೊಳಗಾಗಿ ಅಮಾನತ್ತುಗೊಂಡಿರುವುದರಿಂದ ಸದರಿ ಅಧಿಕಾರಿಯವರ ಬದಲಾಗಿ ಶ್ರೀ ಸುಧೀಂದ್ರ ಭಾರದ್ವಜ, ಅಧೀಕ್ಷಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕೆ.ಆರ್. ನಗರ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿರುತ್ತಾರೆ.

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

--2--

67

**ಸರ್ಕಾರದ ಆದೇಶ ಸಂಖ್ಯೆ: ಕೃಇ 33 ಕೃಪವಿ 2009.**

**ಬೆಂಗಳೂರು, ದಿನಾಂಕ: 28-08-2012.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಪ್ರಕರಣದಲ್ಲಿ ನೇಮಿಸಲಾದ ಮಂಡನಾಧಿಕಾರಿಗಳಾದ ಶ್ರೀ ಎಸ್. ಕಾಂತರಾಜು, ಅಧೀಕ್ಷಕರು, ಇವರನ್ನು ಬದಲಾಯಿಸಿ ಇವರ ಸ್ಥಾನದಲ್ಲಿ ಶ್ರೀ ಸುಧೀಂದ್ರ ಭಾರದ್ವಾಜ, ಅಧೀಕ್ಷಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕೆ.ಆರ್. ನಗರ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ಉಳಿದಂತೆ ಸಮಸಂಖ್ಯೆಯ ದಿನಾಂಕ: 22-06-2009ರ ಆದೇಶದಲ್ಲಿ ವಿಚಾರಣಾಧಿಕಾರಿಯಾಗಿ ನೇಮಿಸಲಾದ ಶ್ರೀ ಎನ್. ಸುಬ್ಬರಾವ್, ನಿವೃತ್ತ ನ್ಯಾಯಾಧೀಶರು ರವರೇ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿ ಮುಂದುವರಿಯುವರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಶ್ರೀ ಎನ್. ಸುಬ್ಬರಾವ್, ನಿವೃತ್ತ ನ್ಯಾಯಾಧೀಶರು, ನಂ.1033, 9ನೇ "ಬಿ" ಮೈನ್, 8ನೇ ಕ್ರಾಸ್, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು-560 065.
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
6. ಅಧೀಕ್ಷಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
7. ಸಂಬಂಧಪಟ್ಟ ಅಧಿಕಾರಿಗಳಿಗೆ (ಆಯುಕ್ತರು, ಕೃಷಿ ಇಲಾಖೆರವರ ಮುಖಾಂತರ)
8. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.

(21)